ಇದಾವುದರಿಂದಲೂ ಶಿಥಿಲವಾಗದ ಗಾಢ ಮೌನ ತುಂಬಿಕೊಂಡಿತು. ಅಲೆಗಳು ಕೆಳಗಿಳಿದು ಹೋದ ಮೇಲೆ ತೆರೆದುಕೊಂಡ ಹಳದಿವರ್ಣದ ಮರಳುಕಟ್ಟೆಗಳು ವಿಶಾಲವಾದ ಸಾಗರದ ನೀರಿನೆದುರು ಬಂಗಾರದ ಪಟ್ಟೆಗಳಂತೆ ಥಳಥಳಿಸಿದವು. ಗೋಪುರದ ಹೊರಮೈ ಸುತ್ತ ಸ್ಪಷ್ಟವಾದ ನೀಲಿ ವರ್ಣದ ಗೆರೆ ಕೊರೆದಂತಿತ್ತು. ನೀರಿನ ಮೇಲೆ, ಉಸುಕಿನ ಮೇಲೆ, ಬಂಡೆಗಲ್ಲುಗಳ ಮೇಲೆ ಆಕಾಶದಿಂದ ಸೂರ್ಯ ಕಿರಣಗಳ ಮಹಾಪ್ರವಾಹವೇ ಸುರಿಯುತ್ತಲಿತ್ತು. ಆ ಕ್ಷಣದಲ್ಲಿ ಒಂದು ಬಗೆಯ ಮಧುರ ಆಯಾಸ ಆ ವೃದ್ಧನನ್ನು ತನ್ನ ವಶಕ್ಕೆ ಪಡೆದುಕೊಂಡಿತ್ತು. ತಾನೀಗ ಅನುಭವಿಸುತ್ತಿರುವ ವಿಶ್ರಾಂತಿ ಅದ್ಭುತವಾಗಿದೆ ಎಂದು ಆತನಿಗೆನಿಸಿತು. ಅದೇ ನಿಮಗ್ನತೆಯಲ್ಲಿ ನಿರಂತರ ಶೂನ್ಯತೆಯ ಕೊರತೆ ತನಗಿದೆ ಎಂದುಕೊಂಡ.

ಸ್ಕಾವಿನ್‌ಸ್ಕಿ ತನಗಾದ ಆನಂದದಿಂದ ತಾನೇ ಉನ್ಮತ್ತನಾಗಿದ್ದ. ಏಕೆಂದರೆ, ಓರ್ವ ವ್ಯಕ್ತಿ ಹೊಸ ಪರಿಸ್ಥಿತಿಗಳಿಗೆ ತನ್ನಷ್ಟಕ್ಕೇ ಸುಲಭವಾಗಿ ಹೊಂದಿಕೊಳ್ಳುತ್ತಾನೆ. ಹಂತ ಹಂತವಾಗಿ ಆತ ಆತ್ಮವಿಶ್ವಾಸ ಕುದುರಿಸಿಕೊಂಡಿದ್ದ. ಮನುಷ್ಯರು ದುರ್ಬಲರಿಗೆ ಮನೆ ಕಟ್ಟಿಕೊಡುವುದಾರೆ, ದೇವರು ಎಲ್ಲ ದುರ್ಬಲರನ್ನು ಒತ್ತಟ್ಟಿಗೆ ಸೇರಿಸಿ ಸಂರಕ್ಷಿಸಬಾರದೇಕೆ? ಕಾಲ ಉರುಳಿದಂತೆ, ಅವನ ಈ ನಂಬಿಕೆಯು ಸದೃಢವಾಯಿತು. ತನ್ನ ಗೋಪುರಕ್ಕೆ, ತನ್ನ ಲಾಟೀನಿಗೆ, ಬಂಡೆಗಲ್ಲುಗಳಿಗೆ, ಮರಳು ದಿಬ್ಬಗಳಿಗೆ, ಏಕಾಂತಕ್ಕೆ ಆ ವೃದ್ಧ ಹೊಂದಿಕೊಂಡ. ಬಂಡೆಗಲ್ಲುಗಳ ಪೊಟರೆಗಳಲ್ಲಿ ಮರಿ ಮಾಡುವ ಕಡಲುಕೋಳಿಗಳ ಜೊತೆ ಕೂಡ ಆತ ಹೊಂದಿಕೊಂಡ. ಅಲ್ಲದೆ, ಸಂಜೆ ಹೊತ್ತು ದೀಪಗೃಹದ ಮಾಳಿಗೆಯ ಮೇಲೆ ಕುಳಿತು ಅವುಗಳ ಜೊತೆ ಸಭೆ ಕೂಡ ನಡೆಸುತ್ತಿದ್ದ. ಸ್ಕಾವಿನ್‌ಸ್ಕಿ ತಾನುಂಡು ಉಳಿದ ಆಹಾರವನ್ನು ಅವುಗಳಿಗೆ ಎಸೆಯುತ್ತಿದ್ದ. ತಕ್ಷಣವೇ ಅವು ಸಾಧುಗೊಳ್ಳುತ್ತಿದ್ದವು. ಅವುಗಳಿಗೆ ಆಹಾರ ತಿನ್ನಿಸಿದ ಮೇಲೆ, ಬಿಳಿ ರೆಕ್ಕೆಗಳ ಬಿರುಗಾಳಿಯೇ ಅವನನ್ನು ಮುತ್ತಿಕೊಳ್ಳುತ್ತಿತ್ತು. ಕುರಿಮಂದೆಯ ಕುರಿಗಾಹಿಯಂತೆ ಆತ ಅವುಗಳ ನಡುವೆ ಹೋಗಿ ನಿಲ್ಲುತ್ತಿದ್ದ. ಸಮುದ್ರದ ಅಬ್ಬರ ಇಳಿಮುಖವಾದಂತೆ, ಆತ ಇಳಿಜಾರು ಮರಳು ದಂಡೆಯ ಕಡೆ ಹೋಗಿ, ಅಲೆಗಳು ಅಲ್ಲಿ ಬಿಟ್ಟು ಹೋದ ಸುವಾಸಿತ ನಸುನೀಲಿ ಬಳ್ಳಿಯನ್ನು ಹಾಗೂ ಸುಂದರವಾದ ಮುತ್ತಿನ ಚಿಪ್ಪುಗಳ ಶೀರ್ಷಪದಿಗಳನ್ನು ಸಂಗ್ರಹಿಸುತ್ತಿದ್ದ. ರಾತ್ರಿವೇಳೆ, ಬೆಳದಿಂಗಳಲ್ಲಿ ದೀಪಗೃಹದ ಸುತ್ತ ಸುರುಳಿ ಸುರುಳಿಯಾಗಿ ಹೆಣೆದುಕೊಂಡ ಬಂಡೆಗಲ್ಲುಗಳ ಬಳಿ ಸಾವಿರಾರು ಸಂಖ್ಯೆಯಲ್ಲಿ ಗಿರಿಕಿ ಹೊಡೆಯುತ್ತಿದ್ದ ಮೀನುಗಳನ್ನು ಹಿಡಿಯಲು ಆತ ಹೋಗುತ್ತಿದ್ದ. ಬರಬರುತ್ತ, ಅಲ್ಲಿದ್ದ ಬಂಡೆಗಲ್ಲುಗಳನ್ನು ಹಾಗೂ ಮರಗಳೇ ಇಲ್ಲದ ದಟ್ಟ ಕುರುಚಲು, ಜಿಗುಟು ಸಸ್ಯಗಳು ಮಾತ್ರ ಹರವಿಕೊಂಡ ಆ ದ್ವೀಪವನ್ನು ಆತ ಪ್ರೀತಿಸತೊಡಗಿದ. ಆದಾಗ್ಯೂ ಆ ದ್ವೀಪದ ಪ್ರಾಕೃತಿಕ ಬಡತನಕ್ಕೆ ಪ್ರತಿಯಾಗಿ ದೂರದ ಸುಂದರ ದೃಶ್ಯಗಳು ಆ ಕೊರತೆಯನ್ನು ನೀಗಿಸುತ್ತಿದ್ದವು. ಇಳಿಹೊತ್ತಿನ ಸಮಯದಲ್ಲಿ ವಾತಾವರಣ ಪಾರದರ್ಶಕವಾಗಿದ್ದಾಗ, ಸಸ್ಯ ಸಂಪದ್ಭರಿತವಾದ ಇಡೀ ಭೂಸಂಧಿಯನ್ನು ಆತ ವೀಕ್ಷಿಸುತ್ತಿದ್ದ. ಅಂಥ ಆ ಸಮಯದಲ್ಲಿ ಒಂದು ದೈತ್ಯಾಕಾರದ ತೋಟವನ್ನು ನೋಡಿದಂತೆ ಆತನಿಗೆ ಭಾಸವಾಗುತ್ತಿತ್ತು ಕೋಕೋ ಗೊಂಚಲುಗಳು ಹಾಗೂ ಹಸಿರು ಸಂಪದ್ಭರಿತ ಪುಷ್ಪಗುಚ್ಛವನ್ನು ಆ್ಯಸ್ಪಿನ್‌ವಾಲ್ ಪಟ್ಟಣದ ಮನೆಗಳ ಹಿಂಬದಿಯಲ್ಲಿ ಇರಿಸಿದಂತೆ ತೋರುತ್ತಿತ್ತು. ಅಲ್ಲಿಂದ ಸ್ವಲ್ಪ ಮುಂದೆ, ಆ್ಯಸ್ಪಿನ್‌ವಾಲ್ ಹಾಗೂ ಪನಾಮಾಗಳ ಮಧ್ಯದಲ್ಲಿ ಭವ್ಯಕಾಡು ಹಬ್ಬಿದೆ. ಅದರ ಮೇಲೆ, ಪ್ರತಿ ಮುಂಜಾನೆ ಹಾಗೂ ಸಂಜೆ, ಕೆಂಪುವರ್ಣದ ಮಂಜಿನ ಆವಿ ತುಯ್ದಾಡುತ್ತದೆ. ಮಲೆತ ನೀರಿನಲ್ಲಿ ಬೇರುಬಿಟ್ಟ, ಲಿಯಾನ್ ಬಳ್ಳಿಯಿಂದ ಹೆಣೆದ ಹಾಗೂ ದೊಡ್ಡಗಾತ್ರದ ಆರ್ಕಿಡ್ಡುಗಳ, ತಾಳೆಮರಗಳ, ಕಬ್ಬಿಣ